<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಡಿ.ಜೆ.ಆರ್., ವಕೀಲರಿಂದಃ</u>

ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ನನ್ನ ಸಹೋದರ, ಸಹೋದರಿಯರು ವಿದ್ಯಾವಂತರಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ತಾಯಿ ವಿದ್ಯಾವಂತಳಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಬಿಎಸ್.ಸ್ಸಿ ಪದವಿ ಓದಿದ್ದು, ಅಕೌಂಟೆಂಟ್ ಆಗಿ ಕೆಲಸ ಮಾಡಿರುತ್ತಾರೆ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ ಹಾಗೂ ನನ್ನ ತಾಯಿ ಸಹಿ ಮಾಡಿದ ದಾಖಲಾತಿಗಳು ಮನೆಯಲ್ಲಿ ಇರುತ್ತವೆ. ನಮ್ಮ ತಂದೆಯವರು ಮೃತರಾದ ನಂತರ ನಮ್ಮ ಕುಟುಂಬದ ಯಜಮಾನಿಕೆಯನ್ನು ನಮ್ಮ ತಾಯಿ ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಈ ಪ್ರಕರಣದ ಪ್ರತಿವಾದಿ ಜಲ್ದೀರಪ್ಪ ಇವರಿಗೂ ಮತ್ತು ನಮಗೂ ಯಾವುದೇ ವಿವಾದ ಇರಲಿಲ್ಲ ಎಂದರೆ ಸರಿ. ಈ ಪ್ರಕರಣ ನಡೆಯುವುದಕ್ಕಿಂತ ಮೊದಲು ಪ್ರತಿವಾದಿ ಜಲ್ದೀರಪ್ಪ ಇವರು ವಾದಿಯವರಾದ ನಮಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮೃತರಾದ ನಂತರ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಏನೇ ವ್ಯವಹಾರ ಆದರೂ ಸಹ ನನ್ನ ತಾಯಿ ನನ್ನ ಗಮನಕ್ಕೆ ತರುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ, ತಾಯಿ, ನನ್ನ ತಂಗಿ ಸುಮ ಹಾಗೂ ನನ್ನ ಸಹೋದರ ಸೀತಾರಾಮ್ ಇವರ ಸಹಿಗಳನ್ನು ನೋಡಿದರೆ ಗುರ್ತಿಸುತ್ತೇನೆ. ಸಾಕ್ಷಿಗೆ ಅಸಲು ದಾವೆ ನಂ. 31/2017 ವಕಾಲತ್ ತೋರಿಸಲಾಗಿ ವಕಾಲತ್ ನಲ್ಲಿರುವ ನನ್ನ ಸಹಿಯನ್ನು ಮಾತ್ರ ನನಗೆ ಗುರುತಿಸಲು ಸಾಧ್ಯವಾಗುತ್ತಿದ್ದು ನನ್ನ ತಾಯಿ, ನನ್ನ ಸಹೋದರ, ಸಹೋದರಿಯರ ಸಹಿಯನ್ನು ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ 4 ಅಂಚೆ ಸ್ವೀಕೃತಿಗಳನ್ನು ತೋರಿಸಲಾಗಿ ಸದರಿ ಅಂಚೆ ಸ್ವೀಕೃತಿಯಲ್ಲಿರುವ ಸಹಿ ಯಾರು ಮಾಡಿರುತ್ತಾರೆ ಅಂತ ನನಗೆ ಹೇಳಲು ಆಗುವುದಿಲ್ಲ. ಉಳಿದ 4 ಅಂಚೆ ಸ್ವೀಕೃತಿಗಳಲ್ಲಿ ಸುಮಾ .ಜೆ ಅಂತ ಸಹಿ ಮಾಡಿದ್ದು ಅದು ನನ್ನ ತಂಗಿ ಸಹಿ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂಗಿ ಸುಮಾ ಜೀವಂತ ಇರುತ್ತಾರೆ.

ನನ್ನ ಹಾಗೂ ನನ್ನ ತಂಗಿ ಸುಮಾ ರವರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇರುವುದಿಲ್ಲ. ಅದೇ ರೀತಿ ಪ್ರತಿವಾದಿ ನಮ್ಮ ವಿರುದ್ಧ ಅಸಲು ದಾವೆ ನಂ. 30/2018 ರಂತೆ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ನಮಗೆ ನ್ಯಾಯಾಲಯದಿಂದ ಸಮನ್ಸ್ ಬಂದಿದ್ದು ಅವುಗಳನ್ನು ನಾವು ಸ್ವೀಕರಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನನ್ನ ಸಹಿಯನ್ನು ನನ್ನ ತಮ್ಮ ಮಾಡುವುದು ಹಾಗೂ ನನ್ನ ತಮ್ಮನ ಸಹಿಯನ್ನು ನಾನು ಮಾಡುವ ಅಭ್ಯಾಸ ಇರುವುದಿಲ್ಲ.

ಸಾಕ್ಷಿಗೆ ಇದೇ ಪ್ರಕರಣದಲ್ಲಿ ಪ್ರಕರಣವು ಸಿವಿಲ್?ನ್ಯಾಯಾಲಯ ಕಿರಿಯ ವಿಭಾಗದಲ್ಲಿ ಚಾಲ್ತಿಯಲ್ಲಿದ್ದಾಗ ನ್ಯಾಯಾಲಯದಿಂದ ನೊಂದಾಯಿತ ಅಂಚೆ ಮೂಲಕ ಸಮನ್ಸ್ ಬಂದಿದ್ದು ಸದರಿ ಸಮನ್ಸ್ ಸ್ವೀಕರಿಸಿದ ಬಗ್ಗೆ ಅಂಚೆ ಸ್ವೀಕೃತಿಯಲ್ಲಿ ಮನೋಹರ ಅಂತ ಸಹಿ ಮಾಡಿದ್ದು ಅದು ನನ್ನ ಸಹಿ ಆಗಿರುವುದಿಲ್ಲ. ನನಗೆ ನನ್ನ ತಾಯಿ ಅಸಲು ದಾವೆ ಸಂಖ್ಯೆಃ 30/2018 ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಅಂತ ಹೇಳಿದ್ದರಿಂದ ನಾನು ಸದರಿ ಆ ಪ್ರಕರಣದಲ್ಲಿ ಹಾಜರಾಗಿರುತ್ತೇನೆ.

ಈಗ್ಗೆ 3 ವರ್ಷಗಳ ಹಿಂದೆ ನಾವು ನಮ್ಮ ತಾಯಿಗೆ ಸಹಿ ಮಾಡಲು ಅಭ್ಯಾಸ ಮಾಡಿಸಿರುತ್ತೇವೆ. ಆದ್ದರಿಂದ ಅಂಚೆ ಸ್ವೀಕೃತಿಯಲ್ಲಿರುವ ಸಹಿಯನ್ನು ಗುರುತಿಸಲು ಆಗುವುದಿಲ್ಲ. ನಮ್ಮ ತಾಯಿ ಅದಕ್ಕಿಂತ ಮೊದಲು ಸಹಿ ಮಾಡುತ್ತಿದ್ದರೋ ಅಥವಾ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರೋ ನನಗೆ ಜ್ಞಾಪಕ ಇಲ್ಲ. ನಾನು ನಮ್ಮ ತಾಯಿ ವಿದ್ಯಾಭ್ಯಾಸಕ್ಕಾಗಿ ಶಾಲೆಗೇನಾದರೂ ಹೋಗಿದ್ದಾರ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಶಾಲೆ ಕಲಿತಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ .

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ನನ್ನ ಸಹಿಯನ್ನು ಈ ಕೇಸಿಗೋಸ್ಕರ ಬದಲಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇದಕ್ಕಿಂತ ಮೊದಲು ನಾನು ಈ ರೀತಿ ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 2009 ರಿಂದ ಈ ರೀತಿ ಸಹಿ ಮಾಡುತ್ತೇನೆ. ನಾನು 2009 ರಿಂದ ಈ ರೀತಿ ಸಹಿ ಮಾಡುತ್ತೇನೆ ಅಂತ ತೋರಿಸಲು ದೃಢೀಕೃತ ದಾಖಲೆಗಳು ಇರುವುದಿಲ್ಲ.

ನಾನು ಹೆಚ್.ಡಿ.ಎಫ್.ಸಿ., ಮತ್ತು ಎಸ್.ಬಿ.ಐ. ಬ್ಯಾಂಕಿನಲ್ಲಿ ಖಾತೆ ತೆಗೆದಿರುತ್ತೇನೆ. ನಾನು 2010 ರಲ್ಲಿ ಹೆಚ್.ಡಿ.ಎಫ್.ಸಿ., ಬ್ಯಾಂಕಿನಲ್ಲಿ ಖಾತೆ ತೆಗೆದಿರುತ್ತೇನೆ. 2015 ನೇ ಇಸವಿಯಲ್ಲಿ ಎಸ್.ಬಿ.ಐ. ಬ್ಯಾಂಕಿನಲ್ಲಿ ಖಾತೆ ತೆಗೆದಿರುತ್ತೇನೆ. ನನ್ನ ಬ್ಯಾಂಕ್? ಖಾತೆಗಳಲ್ಲಿಯೂ ಸಹ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಮಾಡಿರುವಂತೆ ಮಾಡಿರುತ್ತೇನೆ. ನಾನು ವಿದ್ಯಾಭ್ಯಾಸ ಮಾಡುತ್ತಿರುವ ಕಾಲಕ್ಕೆ ಜೆ. ಮನೋಹರ್ ಅಂತ ಸಹಿ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿಃ 1 ಕ್ರಯದ ಕರಾರು ಪತ್ರ ತೋರಿಸಲಾಗಿ ಅದರಲ್ಲಿರುವ ಜೆ. ಮನೋಹರ್ ಸಹಿ ನನ್ನ ಸಹಿ ಆಗಿರುವುದಿಲ್ಲ. ನಿಡಿಃ 1 ದಾಖಲೆಯಲ್ಲಿರುವ ನಿಡಿಃ 1(ಎ) , 1(ಬಿ), 1(ಸಿ) ಸಹಿಗಳು ನನ್ನ ತಾಯಿ, ನನ್ನ ಅಣ್ಣ ಮತ್ತು ನನ್ನ ತಂಗಿಯ ಸಹಿಗಳಾಗಿರುತ್ತವೆ ಆದರೆ ಮಧ್ಯದಲ್ಲಿರುವ ಸಹಿ ಜೆ. ಮನೋಹರ್ ಅಂತ ಇರುವುದು ನನ್ನ ಸಹಿಯಾಗಿರುವುದಿಲ್ಲ. ನಾನು ನಿಡಿಃ 1 ರಲ್ಲಿ ಜೆ. ಮನೋಹರ್ ಅಂತ ಸಹಿ ಮಾಡಿದ್ದರೂ ಸಹ ಈ ಕೇಸಿಗೋಸ್ಕರ ಸದರಿ ಸಹಿ ನನ್ನ ಸಹಿ ಆಗಿದ್ದರೂ ಸಹ ನನ್ನ ಸಹಿ ಅಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿಃ 1 ಕರಾರು ಪತ್ರ ನೋಡಿ 5-6 ವರ್ಷ ಆಗಿರುತ್ತದೆ. ನಿಡಿಃ 1 ಕರಾರು ಪತ್ರ ಆದ ನಂತರ ಅದರ ಜೆರಾಕ್ಸ್ ಪ್ರತಿ ನಮ್ಮ ಮನೆಯಲ್ಲಿ ಒಂದು ಕಾಪಿ ಇತ್ತು ಎಂದರೆ ಸರಿಯಲ್ಲ. ನಮ್ಮ ತಾಯಿ ಅವಿದ್ಯಾವಂತೆ ಅಂತ ಹೇಳಿದ್ದು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ನಮ್ಮ ಮನೆಯ ಅಕ್ಕಪಕ್ಕದವರಿಗೆ ತೋರಿಸುತ್ತಿದ್ದರು. ನಮ್ಮ ತಾಯಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನಗೆ ಏನು ಹೇಳುತ್ತಿರಲಿಲ್ಲ.

ಈಗಲೂ ನಮ್ಮ ಕುಟುಂಬದ ಯಜಮಾನಿಕೆಯನ್ನು ನಾನು ನೋಡುತ್ತಿದ್ದೇನೆ. ನಾನು ಸುಮಾರು 8-9 ವರ್ಷಗಳಿಂದ ನಮ್ಮ ಕುಟುಂಬದ ಯಜಮಾನಿಕೆ ಮಾಡುತ್ತಿದ್ದೇನೆ. ಅದಕ್ಕಿಂತ ಮೊದಲು ನಮ್ಮ ಕುಟುಂಬದ ಯಜಮಾನಿಕೆಯನ್ನು ನಮ್ಮ ತಂದೆಯವರು ಮಾಡುತ್ತಿದ್ದರು. ವ್ಯಾಜ್ಯದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯ ಮಧ್ಯೆ ಮತ್ತು ನಮ್ಮ ಕುಟುಂಬದ ಮಧ್ಯೆ ಏನು ವ್ಯವಹಾರ ಆಗಿರುತ್ತದೆ ಅಂತ ಖುದ್ದು ಮಾಹಿತಿ ಇರುವುದಿಲ್ಲ.

ಪ್ರತಿವಾದಿಯವರ ಮಧ್ಯೆ ವ್ಯಾಜ್ಯದ ಆಸ್ತಿಗಳಿಗೆ ಸಂಬಂಧಪಟ್ಟಂತೆ ವ್ಯವಹಾರ ಆದಾಗ ನಾನು ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆನು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯವನ್ನು ನನ್ನ ತಾಯಿ ಹೇಳಿದ ಮೇರೆಗೆ ಬರೆಸಿರುತ್ತೇನೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನ್ನ ತಾಯಿ ಹೇಳಿದ್ದರಿಂದ ಬರೆಸಿರುತ್ತೇನೆ ಅಂತ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ಹೇಳಿದ್ದರಿಂದ ವಿಷಯ ಗೊತ್ತಾಗಿರುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನ್ನ ತಾಯಿ ಹೇಳಿ ಬರೆಸಿರುವುದರಿಂದ ನನಗೆ ಪ್ರಕರಣದ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಸಲ್ಲಿಸಲು ಮಾಹಿತಿಯನ್ನು ನನ್ನ ತಾಯಿ ಕೊಟ್ಟಿರುತ್ತಾರೆ.

ವಾದ ಪತ್ರದಲ್ಲಿರುವ ಸಹಿಗಳನ್ನು ವಕೀಲರ ಕಚೇರಿಗೆ ಹೋಗಿ ಮಾಡಿರುತ್ತೇನೆ. ವಾದಪತ್ರದಲ್ಲಿರುವ ಸಹಿ ನನ್ನ ತಾಯಿ, ನನ್ನ ಸಹೋದರಿ ಹಾಗೂ ಸಹೋದರನದ್ದು ಇರುತ್ತದೆ ಎಂದರೆ ಸರಿ. ನಾನು 2017 ನೇ ಇಸವಿಯಲ್ಲಿ ಈ ಪ್ರಕರಣ ದಾಖಲಿಸಿದಾಗ ಈ ರೀತಿ ಸಹಿ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವ ಮೊದಲು ನಾನು ಇದೇ ರೀತಿ ಸಹಿ ಮಾಡುತ್ತಿದ್ದೇನೆ ಅಂತ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಮಾಡಿಲ್ಲ ಎಂದರೆ ಸರಿ.

ಅದೇ ರೀತಿ ಪ್ರತಿವಾದಿಯವರು ನಮ್ಮ ವಿರುದ್ಧ ಸಲ್ಲಿಸಿದ ದಾವೆಗೆ ಈ ಕೇಸಿಗೋಸ್ಕರ ನಾನು ನನ್ನ ಸಹಿಯನ್ನು ಬದಲಾವಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ತಾಯಿ ಸಾಕ್ಷಿ ವಿಚಾರಣೆ ಹೇಳಿ ಹೋಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಈ ಪ್ರಕರಣದಲ್ಲಿ ಏನು ಸಾಕ್ಷಿ ವಿಚಾರಣೆ ಕೊಟ್ಟಿರುತ್ತಾರೆ ಅಂತ ನಾನು ಸ್ವಲ್ಪ ತಿಳಿದುಕೊಂಡಿರುತ್ತೇನೆ. ನನ್ನ ತಾಯಿ ಕೊಟ್ಟಿರುವ ಸಾಕ್ಷಿ ವಿಚಾರಣೆಯಲ್ಲಿ ನೀಡಿದ ತಪ್ಪುಗಳನ್ನು ಸರಿಪಡಿಸಲು ನಾನು ನನ್ನ ಸಾಕ್ಷಿ ವಿಚಾರಣೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು, ನನ್ನ ತಾಯಿ, ನನ್ನ ಸಹೋದರ ಹಾಗೂ ಸಹೋದರಿ ಯವರು ಪ್ರತಿವಾದಿ ಜಲ್ದೀರಪ್ಪ ಇವರಿಗೆ ಕ್ರಯದ ಕರಾರಿನ ಅನ್ವಯ ರೂ.4,00,000/- ಅವರಿಂದ ಹಣ ಪಡೆದು ನಿಡಿಃ 1 ರಂತೆ ಕ್ರಯದ ಕರಾರು ಪತ್ರ ಬರೆದುಕೊಟ್ಟರೂ ಸಹ ಬರೆದುಕೊಟ್ಟಿಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರ ಆದ ದಿನವೇ ನಾವು ಪ್ರತಿವಾದಿಗೆ ದಾವಾ ಜಮೀನಿನ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಾವು ಪ್ರತಿವಾದಿಗೆ ನಮ್ಮ ಜಮೀನನ್ನು ಗುತ್ತಿಗೆ ಆಧಾರದ ಮೇರೆಗೆ ವ್ಯವಸಾಯ ಮಾಡಲು ಕೊಟ್ಟಿರುತ್ತೇವೆ ಅಂತ ಹೇಳಿದ್ದು ಈ ಕುರಿತು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆಗ ನಾವು ಚಿಕ್ಕವರಿದ್ದೆವು ಅಂತ ಸಾಕ್ಷಿ ನುಡಿಯುತ್ತಾರೆ. ನಾವು ಚಿಕ್ಕವರಿದ್ದುದರಿಂದ ಸದರಿ ವಿಷಯವನ್ನು ನಮ್ಮ ತಾಯಿ ನಮಗೆ ಜಮೀನನ್ನು ಪ್ರತಿವಾದಿಗೆ ಗುತ್ತಿಗೆಗೆ ಕೊಟ್ಟಿರುತ್ತೇನೆ ಅಂತ ತಿಳಿಸಿರುತ್ತಾರೆ. ದಾವಾ ಜಮೀನನ್ನು ಪ್ರತಿವಾದಿಗೆ ಗುತ್ತಿಗೆಗೆ ಕೊಟ್ಟ ಬಗ್ಗೆ ನಮ್ಮ ತಾಯಿಯ ಬಳಿ ದಾಖಲಾತಿ ಇದೆಯೋ ಇಲ್ಲವೋ ಎಂಬ ಬಗ್ಗೆ ನಾನು ಕೇಳಿರುವುದಿಲ್ಲ.

ನಿಡಿಃ 1 ಕ್ರಯದ ಕರಾರು ಪತ್ರದ ಅನ್ವಯ ಪ್ರತಿವಾದಿ ಹೆಸರಿಗೆ ದಾವಾ ಜಮೀನಿನ ಶುದ್ಧ ಕ್ರಯಪತ್ರ ಬರೆದುಕೊಡಲು ತಪ್ಪಿಸುವ ಉದ್ದೇಶದಿಂದ ನಾನು, ನನ್ನ ತಾಯಿ, ಸಹೋದರ ಹಾಗೂ ಸಹೋದರಿಯವರು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.